<u>ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್ -1) ರವರ ನ್ಯಾಯಾಂಗಣದಲ್ಲಿ</u>

<u>ಎಸ್.ಸಿ. ಸಂಖ್ಯೆ: 308/2021</u>

ಚಾ.ಸಾ- 2 ಫ್ರಾ.ಸಾ- 6

ದಿಃ 02.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಅಶೋಕ್ |
| ತಂದೆ ಹೆಸರು | ಪ್ರಕಾಶ್ |
| ವಯಸ್ಸು | 27 ವರ್ಷ |
| ವೃತ್ತಿ | ಚಾಲಕ |
| ವಿಳಾಸ | ಜೆ.ಜೆ.ನಗರ, ಬೆಂಗಳೂರು |

<u>ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ</u>

ಈಗ ನನಗೆ ತೋರಿಸಿರುವ ನಿ.ಪಿ-2 ರಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಸುಮಾರು 2 ವರ್ಷದ ಹಿಂದೆ ಜೆ.ಜೆ.ನಗರ ಪೋಲೀಸ್ ಠಾಣೆಯಲ್ಲಿ ಈ ದಾಖಲೆಗೆ ಸಹಿ ಮಾಡಿರುತ್ತೇನೆ. ಈಗ ನನಗೆ ತೋರಿಸಿರುವ ಇನ್ನೊಂದು ದಾಖಲೆಯಲ್ಲಿ ಕೂಡ ನನ್ನ ಸಹಿ ಇದೆ. ಸಾಕ್ಷಿಗೆ ತೋರಿಸಿದ ದಾಖಲೆಯನ್ನು ನಿ.ಪಿ-6 ಎಂದು ಗುರುತಿಸಲಾಯಿತು. ಇದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿ.ಪಿ-6(ಎ) ಎಂದು ಗುರುತಿಸಲಾಯಿತು. ಈ ದಾಖಲೆಗೆ ಕೂಡ ನಾನು ಠಾಣೆಯಲ್ಲಿ ಸಹಿ ಮಾಡಿದ್ದೆ.

2. ನನಗೆ ನಿ.ಪಿ-2 ಮತ್ತು ನಿ.ಪಿ-6 ರಲ್ಲಿ ಏನು ನಮೂದಿಸಲಾಗಿದೆ ಎಂದು ಗೊತ್ತಿಲ್ಲ. ಸಂಬಂಧಿತ ದಿನದಂದು ನಾನು ಕೆಲಸ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದ ವೇಳೆಯಲ್ಲಿ ಪೋಲೀಸರು ನನ್ನನ್ನು ಠಾಣೆಗೆ ಕರೆಸಿಕೊಂಡು ಈ ದಾಖಲೆಗಳಿಗೆ ನನ್ನ ಸಹಿಯನ್ನು ಪಡೆದಿದ್ದರು. ಪೋಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿರಲಿಲ್ಲ.

ಈ ಹಂತದಲ್ಲಿ ಮಾನ್ಯ ಮುಖ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯ ಹೇಳಿಕೆ ಹಾಗು ಕಡತದಲ್ಲಿನ ದಾಖಲೆಗಳನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.

<u>ಪಾಟಿಸವಾಲುಃ ಮಾನ್ಯ ಅಭಿಯೋಜಕರಿಂದಃ</u>

3. ದಿಃ 1.9.2020 ರಂದು ಚಾ.ಸಾ-11 ರವರು ನನ್ನನ್ನು ಹಾಗು ಚಾ.ಸಾ-3 ರವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆಸಿಕೊಂಡು ನಮ್ಮ ಸಮಕ್ಷಮದಲ್ಲಿ ನಿ.ಪಿ-2 ರಂತೆ ಕೃತ್ಯ ಸ್ಥಳದ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾ.ಸಾ-11 ರವರು ನಮ್ಮ ಸಮಕ್ಷಮ ಚಾ.ಸಾ-1 ರವರು ಹಾಜರುಪಡಿಸಿದ್ದ ಮು.ಮಾ-1 ರಿಂದ ಮು.ಮಾ-3 ರಲ್ಲಿ ಗುರುತಿಸಿರುವ ಸ್ವತ್ತುಗಳನ್ನು ಅಮಾನತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಮಗೆ ಸದರಿ ಪಂಚನಾಮೆಗೆ ಹಾಜರಾಗುವಂತೆ ನಿ.ಪಿ-6 ರಂತೆ ನೋಟೀಸು ನೀಡಲಾಗಿತ್ತು ಎಂದರೆ ಸರಿಯಲ್ಲ.

4. ನನಗೆ ನಿ.ಪಿ-2 ರಂತೆ ಸ್ಥಳ ಪಂಚನಾಮೆ ಮಾಡಿರುವ ವಿಚಾರ ಮತ್ತು ಆ ಕಾಲಕ್ಕೆ ಅಮಾನತುಪಡಿಸಿಕೊಂಡ ಸ್ವತ್ತುಗಳ ವಿಚಾರ ತಿಳಿದಿದ್ದರೂ ಈಗ ನಾನು

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಆರೋಪಿ ಪರ ವಕೀಲರು ಗೈರುಹಾಜರಾಗಿರುತ್ತಾರೆ. 1 ನೇ ಆರೋಪಿಯು ತನ್ನ ಪರ ಪಾಟಿಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.